

ಐಪಿಎಲ್; ಇದು ಬಣ್ಣದ ಬೆರಗಿನ ಲೋಕ

# ರನ್ ಹೊಳೆ ಹರಿಸಿದರೂ ಸಿಗದ ಅವಕಾಶ



ಐಪಿಎಲ್ ಅಬ್ಬರದಲ್ಲಿ ರಣಜಿ ನಿರ್ಲಕ್ಷಿಸುವಂತಿಲ್ಲ ಎಂದು ಆಟಗಾರರಿಗೆ 'ಬಿಸಿಸಿಐ' ಮೇಲ್ನೋಟಕ್ಕೆ ಹೇಳುತ್ತಿದೆಯಾದರೂ, ದೇಶಿ ಟೂರ್ನಿಗಳಲ್ಲಿ ರನ್ ಹೊಳೆ ಹರಿಸಿದ ಬ್ಯಾಟ್ಸ್‌ಮನ್‌ಗಳಿಗೆ ರಾಷ್ಟ್ರೀಯ ತಂಡದಲ್ಲಿ ಅವಕಾಶ ಕಲ್ಪಿಸುತ್ತಿಲ್ಲ. ಭರವಸೆಯ ಪ್ರತಿಭೆ ಮುಂಬೈನ ಸರ್ಫರಾಜ್ ಖಾನ್ ಇದಕ್ಕೊಂದು ಉತ್ತಮ ಉದಾಹರಣೆ.

ಬಲಗೈ ಬ್ಯಾಟ್ಸ್‌ಮನ್, 25 ವರ್ಷದ ಸರ್ಫರಾಜ್ ತಮ್ಮ 12ನೇ ವಯಸ್ಸಿನಲ್ಲಿ ಹರಿಸಿದ ರನ್ ಹೊಳೆಯಿಂದಾಗಿ ಜಗತ್ತಿನ ಗಮನ ಸೆಳೆದರು. 2009ರಲ್ಲಿ ಹ್ಯಾರಿಸ್ ಶೀಲ್ಡ್ ಅಂತರ ಶಾಲಾ ಕ್ರಿಕೆಟ್ ಟೂರ್ನಿಯಲ್ಲಿ ಸರ್ಫರಾಜ್ ರಿಜ್ವಿ ಸ್ಪ್ರಿಂಗ್‌ಫೀಲ್ಡ್ ಶಾಲಾ ತಂಡವನ್ನು ಪ್ರತಿನಿಧಿಸಿ 421 ಎಸೆತಗಳಲ್ಲಿ 439 ರನ್ ಗಳಿಸುವ ಮೂಲಕ 1988ರಲ್ಲಿ ಸಚಿನ್ ತೆಂಡೂಲ್ಕರ್ ಗಳಿಸಿದ್ದ ದಾಖಲೆ ಅಳಿಸಿಹಾಕಿದ್ದರು. ಇದರಿಂದ 19 ವರ್ಷದ ಒಳಗಿನವರ ಭಾರತ ತಂಡದಲ್ಲಿ ಅವಕಾಶ ಲಭಿಸಿತು. 2013ರಲ್ಲಿ ನಡೆದ ಚತುಷ್ಕೋನ ಸರಣಿಯಲ್ಲಿ ದಕ್ಷಿಣ ಆಫ್ರಿಕಾ ಎದುರು 66 ಎಸೆತಗಳಲ್ಲಿ 101 ರನ್ ಗಳಿಸಿ ಪಂದ್ಯದ ಗೆಲುವಿನಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದರು.

ಸರ್ಫರಾಜ್ ಬ್ಯಾಟಿಂಗ್ ಸೊಗಸು ಮೆಚ್ಚಿಕೊಂಡ ಬಿಸಿಸಿಐ ಆಯ್ಕೆ ಸಮಿತಿ 2014 ಮತ್ತು 2016ರ 19 ವರ್ಷದ ಒಳಗಿನವರ ವಿಶ್ವಕಪ್ ಟೂರ್ನಿಗೆ ಭಾರತ ತಂಡಕ್ಕೆ ಆಯ್ಕೆ ಮಾಡಿತು. 2015ರಲ್ಲಿ ಆರ್‌ಸಿಬಿ ತಂಡ ₹50 ಲಕ್ಷಕ್ಕೆ ಖರೀದಿಸಿತು. ಐಪಿಎಲ್ ತಂಡಕ್ಕೆ ಆಯ್ಕೆಯಾದ ಅತಿ ಕಿರಿಯ ವಯಸ್ಸಿನ ಆಟಗಾರ ಎನ್ನುವ ಕೀರ್ತಿಗೂ ಪಾತ್ರರಾದರು.

37 ಪ್ರಥಮ ದರ್ಜೆ ಪಂದ್ಯಗಳನ್ನಾಡಿರುವ (ದೆಹಲಿ ಎದುರಿನ ರಣಜಿ ಪಂದ್ಯದ ಅಂತ್ಯಕ್ಕೆ) ಸರ್ಫರಾಜ್ ಸ್ಥಿರ ಪ್ರದರ್ಶನದ ಮೂಲಕ ಗಮನ ಸೆಳೆಯುತ್ತಿದ್ದಾರೆ. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಒಟ್ಟು 3,505 ರನ್ ಗಳಿಸಿದ್ದಾರೆ. 13 ಶತಕ ಮತ್ತು ಒಂಬತ್ತು ಅರ್ಧಶತಕಗಳು ಇದರಲ್ಲಿ ಸೇರಿವೆ. 79.65 ಬ್ಯಾಟಿಂಗ್ ಸರಾಸರಿ ಹೊಂದಿದ್ದಾರೆ. 2022–23ರ ರಣಜಿ ಋತುವಿನಲ್ಲಿ ಆಡಿರುವ ಆರು ಪಂದ್ಯಗಳಿಂದ ಮೂರು ಶತಕ ಮತ್ತು ಒಂದು ಅರ್ಧಶತಕ ಗಳಿಸಿದ್ದಾರೆ. ಆದರೂ ಮುಂಬರುವ ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ಸರಣಿಯ ಮೊದಲ ಎರಡು ಪಂದ್ಯಗಳಿಗೆ ಪ್ರಕಟಿಸಿರುವ ತಂಡದಲ್ಲಿ ಸ್ಥಾನ ಸಿಕ್ಕಿಲ್ಲ ಎನ್ನುವುದೇ ಅಚ್ಚರಿ!

ವರ್ಷಗಳ ಅವಧಿಯಲ್ಲಿ ಭಾರತ ತಂಡ ಶ್ರೀಲಂಕಾ, ನ್ಯೂಜಿಲೆಂಡ್, ಆಸ್ಟ್ರೇಲಿಯಾ, ಇಂಗ್ಲೆಂಡ್, ದಕ್ಷಿಣ ಆಫ್ರಿಕಾ, ವೆಸ್ಟ್ ಇಂಡೀಸ್, ಜಿಂಬಾಬ್ವೆ ಮತ್ತು ಬಾಂಗ್ಲಾದೇಶ ಎದುರು ಸರಣಿಗಳನ್ನು ಆಡಿತು. ಈ ಬಿಡುವಿಲ್ಲದ ವೇಳಾಪಟ್ಟಿಯಿಂದಾಗಿ ಭಾರತೀಯ ಆಟಗಾರರು ಫಿಟ್‌ನೆಸ್ ಕಾಯ್ದುಕೊಳ್ಳಲು ಆಗದೇ ಪರದಾಡಿದರು. ಕರ್ನಾಟಕದ ಕೆ.ಎಲ್. ರಾಹುಲ್ ಮಂಡಿರಜ್ಜು ಗಾಯ, ಮಣಿಕಟ್ಟಿನ ಗಾಯದ ಸಮಸ್ಯೆಯಿಂದ ರಾಷ್ಟ್ರೀಯ ತಂಡದಿಂದ ಹೊರಗುಳಿದರು. ದಕ್ಷಿಣ ಆಫ್ರಿಕಾ ಎದುರಿನ ಸರಣಿ ವೇಳೆ ತೊಡೆಸಂದು ಗಾಯ ಇನ್ನಿಲ್ಲದಂತೆ ಕಾಡಿತು. ಚಿಕಿತ್ಸೆಗಾಗಿ ಜರ್ಮನಿಗೆ ಹೋಗಿದ್ದರಿಂದ ಇಂಗ್ಲೆಂಡ್ ಎದುರಿನ ಸರಣಿಗೂ ಅಲಭ್ಯರಾದರು.

ಗಾಯದ ಕಾರಣದಿಂದ ತಂಡದಿಂದ ಹೊರಗುಳಿದಿದ್ದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಚೇತರಿಸಿಕೊಂಡು 2022ರ ಐಪಿಎಲ್ ವೇಳೆಗೆ ತಂಡಕ್ಕೆ ಮರಳಿದರು. ವೇಗದ ಬೌಲರ್ ಭುವನೇಶ್ವರ ಕುಮಾರ್ ತೊಡೆ ಮತ್ತು ಮಂಡಿರಜ್ಜು ಗಾಯದ ನೋವು ಅನುಭವಿಸಿದರು. ಫಿಟ್‌ನೆಸ್ ಕೊರತೆ ಕಾರಣದಿಂದ ಭಾರತ ತಂಡದ ನಾಯಕ ರೋಹಿತ್ ಶರ್ಮಾ 2020ರಿಂದ ಎಲ್ಲಾ ಟೂರ್ನಿಗಳಲ್ಲಿ ತಂಡವನ್ನು ಮುನ್ನಡೆಸಿಲ್ಲ. ಬಾಂಗ್ಲಾದೇಶ ಎದುರಿನ ಏಕದಿನ ಸರಣಿಗೂ ಮೊದಲು ವೇಗದ ಬೌಲರ್ ಮೊಹಮ್ಮದ್ ಶಮಿ ಭುಜದ ನೋವು ಅನುಭವಿಸಿದರು. ದೀಪಕ್ ಚಾಹರ್‌ಗೂ ಗಾಯ ತಪ್ಪಲಿಲ್ಲ. ಭಾರತದ ಪ್ರಮುಖ ಬೌಲರ್ ಜಸ್ಪ್ರೀತ್ ಬೂಮ್ರಾ ಪದೇ ಪದೇ ಗಾಯಾಳುಗಳ ಪಟ್ಟಿ ಸೇರುತ್ತಿದ್ದಾರೆ.

ಆಟಗಾರರು ಗಾಯಗೊಂಡ ಪರಿಣಾಮ ತಂಡದ ಪ್ರದರ್ಶನದ ಮೇಲೂ ಆಯಿತು. ಕಳೆದ ಐದು ವರ್ಷಗಳ ಅವಧಿಯಲ್ಲಿ ಭಾರತ ತಂಡ ಉತ್ತಮ ಗೆಲುವುಗಳನ್ನು ಪಡೆದರೂ

